

## 1

ಸ್ಟ್ರೈಶ್ನೆಫ್ ತನ್ನ ಕುದುರೆಗೆ ಹಲ್ಲಣವ ಕಟ್ಟುವಂತೆ ಆಜ್ಞಾಪಿಸಿದಾಗ ಚಳಿ ಹಿಡಿದಿದ್ದ ವಿಷಣ್ಣ ಶರತ್ಕಾಲದ ರಾತ್ರಿಗೆ ಚಂದ್ರನ ಬೆಳಕಿತ್ತು.

ಚಂದ್ರನ ಬೆಳಕು ಕತ್ತಲ ಲಾಯದ ಪುಟ್ಟ ಕಿಟಕಿಯ ಮೂಲಕ ಹಳದಿ ಹೊಗೆಯ ಗೆರೆಯಾಗಿ ಅಮೂಲ್ಯ ಶಿಲೆಯ ಪ್ರಭೆಯೊಂದಿಗೆ ಸವಾರಿ ಕುದುರೆಯ ಕಣ್ಣೊಂದನ್ನು ಬೆಳಗಿಸತೊಡಗಿತ್ತು. ಕುದುರೆಯಾಳು ಲಗಾಮಿನ ತಲೆಪಟ್ಟಿ ಮತ್ತು ಪೆಡಸು ಕಾಸ್ಯಾಕ್ ಹಲ್ಲಣವನ್ನು ಕುದುರೆಯ ಮೇಲೆ ಹಾಕಿ, ಲಗಾಮನ್ನು ಹಿಡಿದು ಅದನ್ನು ಆಚೆಗೆ ಎಳೆ ತಂದು, ಅದರ ಬಾಲಕ್ಕೊಂದು ಕುಣಿಕೆ ಹಾಕಿ ಕಟ್ಟಿದ. ಕುದುರೆ ವಿಧೇಯವಾಗಿತ್ತು. ಜೀನು ಪಟ್ಟಿ ಹಾಕಿದಾಗಷ್ಟೇ ಎಚ್ಚರಗೊಂಡ ಅದು, ಪಕ್ಕೆಲಬುಗಳನ್ನು ಒಮ್ಮೆ ಹಿಗ್ಗಿಸಿ ದೀರ್ಘ ನಿಟ್ಟುಸಿರುಬಿಟ್ಟಿತು. ಜೀನಿನ ಒಂದು ಎಳೆ ಮುರಿದಿತ್ತು. ಕುದುರೆಯಾಳು ಕುದುರೆಯ ಬಾಯೊಳಗಿಂದ ಅದನ್ನು ತೆಗೆದುಕೊಂಡು ಹೇಗೋ ಮಾಡಿ ಇನ್ನೊಂದು ತುದಿಗೆ ತಲುಪು ಹಾಕಿದ.

ಹಲ್ಲಣವನ್ನು ಹಾಕಿದ್ದು ತಿಳಿದ ಮೇಲೆ ಠೊಣಪ ಗಿಡ್ಡ ಕುದುರೆ ಕೊಂಚ ಕಳ್ಳಗುದುರೆಯ ಥರ ಕಂಡಿತು. ಕುದುರೆಯಾಳು ಮನೆಯ ಮುಂದಿನ ಅಂಗಳಕ್ಕೆ ಎಳೆದೊಯ್ದು, ಅಲ್ಲಿ ಆಗಲೋ ಈಗಲೋ ಮುರಿದು ಬೀಳುವಂತಿದ್ದ ಮರದ ಗಣೆಯೊಂದಕ್ಕೆ ಅದನ್ನು ಕಟ್ಟಿ ಹೊರಟು ಹೋದ. ತುಂಬಾ ಹೊತ್ತಿನವರೆಗೂ ಕುದುರೆ ತನ್ನ ಹಳದಿ ಹಲ್ಲುಗಳಿಂದ ಮರದ ಗಣೆಯನ್ನು ಬಿಡದೆ ಕಡಿಯುತ್ತಾ ನಿಂತಿತ್ತು. ಹಾಗೆ ನಿಂತಿದ್ದ ಅದು ತನ್ನ ಪಕ್ಕೆಲಬು ಮತ್ತು ಕಿಬ್ಬೊಟ್ಟೆಗಳನ್ನು ಉಬ್ಬಿಸಿಕೊಂಡು ಒಮ್ಮೆ ಕೆನೆಯಿತು. ಆಗ ಪಕ್ಕದಲ್ಲಿದ್ದ ಕೆಸರು ಗುಂಡಿಯಲ್ಲಿ ಕಳೆಗುಂದುತ್ತಿದ್ದ ಚಂದ್ರನ ಹಸಿರು ಪ್ರತಿಫಲನವಿತ್ತು. ಮಬ್ಬು ಮಂಜು ಖಾಲಿ ತೋಟದ ಮೇಲೆ ಇಳಿಯತೊಡಗಿತ್ತು.

ಕೈಯ್ಯಲ್ಲಿ ಬಾರುಕೋಲೊಂದನ್ನು ಹಿಡಿದ ಸ್ಟ್ರೈಶ್ನೆಫ್ ಮೊಗಸಾಲೆಯಲ್ಲಿ ಕಾಣಿಸಿಕೊಂಡ. ಅವನು ಧರಿಸಿದ್ದ ಕಂದು ಬಣ್ಣದ 'ಪಡಾಯ್‌ವ್ಕಾ'(ಕಾಲರ್ ಇಲ್ಲದ ಉದ್ದನೆಯ ಕೋಟು)ದಿಂದಾಗಿ, ಗಿಣಿಮೂಗಿನ, ಸಣ್ಣತಲೆಯ ಅವನು ಎತ್ತರವಾಗಿಯೂ ಹಾಗೂ ಠೀಕಾಗಿಯೂ ಕಾಣುತ್ತಿದ್ದ. ಅವನ ತೆಳ್ಳನೆಯ ಸೊಂಟದಲ್ಲಿ ಬೆಳ್ಳಿ ಮುಲಾಮಿನ ಬಣ್ಣದ ಚರ್ಮದ ಬೆಲ್ಟ್ ಇತ್ತು. ಜೊತೆಗೆ, ಕಂದುಬಣ್ಣಕ್ಕೆ ತಿರುಗಿದ್ದ ಒರಟು ಗಡ್ಡ ಮತ್ತು ನರಪೇತಲ ಕುತ್ತಿಗೆ. ಮೇಲ್ತುದಿಯಲ್ಲಿ ಕಡುಗೆಂಪು ತುಪ್ಪಳವಿದ್ದ ಟೋಪಿ ತಲೆಯಲ್ಲಿತ್ತು. ಚಂದ್ರನ ಬೆಳಕಿನಲ್ಲಿ ಕೂಡಾ ನೋವಿನ ಹೊಡೆತಗಳಿಂದ ಸೋತುಹೋದ ಭಾವ ಎದ್ದು ಕಾಣುತ್ತಿತ್ತು. ಉದ್ದಕ್ಕಿದ್ದ ಅವನ ಬೂಟುಗಳು ಹಳೆಯದಾಗಿದ್ದವು. ಅವನ ಕೋಟಿನ ಅಂಚಿನಲ್ಲಿ ತುಂಬಾ ಹಳತಾದ ಮೊಲದ ರಕ್ತದ ಒಣಗಿದ ಕಪ್ಪು ಕಲೆಗಳಿದ್ದವು.

ಅಂಗಳದ ಹಿಂದಿದ್ದ ಪುಟ್ಟ, ಮಸಿ ಹಿಡಿದ ಕಿಟಕಿಯೊಂದು ತೆರೆದುಕೊಂಡು, ಅದರೊಳಗಿಂದ ಪುಕ್ಕಲು ದನಿಯೊಂದು ಕೇಳಿತು: